CW.4 PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.37/2011

| | |
|---|---|
| ಸಾಕ್ಷಿದಾರರ ಹೆಸರು | ಕೊಪ್ಪ ಸಿದ್ದಯ್ಯ |
| ತಂದೆಯ ಹೆಸರು | ಮುನಿಸಿದ್ದಯ್ಯ |
| ವಯಸ್ಸು | 45 ವರ್ಷ |
| ವೃತ್ತಿ | ಮುಖ್ಯಪೇದೆ, ಬಿಡದಿ ಪೋಲೀಸ್ ಠಾಣೆ |
| ವಿಳಾಸ | ಬಿಡದಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 19.11.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ನೋಡಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

2009 ರಿಂದ 2011 ರವರೆಗೂ ನಾನು ವಿಶೇಷ ಅಬಕಾರಿ ಠಾಣೆಯಲ್ಲಿ ಪೇದೆಯಾಗಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ14.09.2010 ರಲ್ಲಿ ಬೆಳಿಗ್ಗೆ 8 ಗಂಟೆಯ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರಿಗೆ ಒಂದು ವರ್ತಮಾನ ಬಂದಿದ್ದು ಅದರಂತೆ ನಾನು ಚಾಸಾ-2, ಚಾಸಾ-3 ರಿಂದ 5 ರವರು ಚಾಸಾ-1 ರವರೊಟ್ಟಿಗೆ ಸರ್ಕಾರಿ ವಾಹನವಾದ ಕೆಎ-42-ಜಿ-10 ವಾಹನದಲ್ಲಿ ವಾಸಪ್ಪನದೊಡ್ಡಿ, ಕೋಡಿಹಳ್ಳಿ ಹೋಬಳಿಗೆ ಹೋಗಿದ್ದು ಸುಮಾರು 10 ಗಂಟೆಯ ಸಮಯದಲ್ಲಿ ನಮ್ಮನ್ನು ನೋಡಿ ಒಬ್ಬ ಅಸಾಮಿ ಓಡಿ ಹೋದ. ಆತ ಕಳ್ಳಭಟ್ಟಿ ಸಾರಾಯಿ ಮಾರುತ್ತಿದ್ದ. ಆತನನ್ನು ಹಿಡಿಯಲು ಪ್ರಯತ್ನಿಸಿದಾಗ ಸಿಗಲಿಲ್ಲ. ಸ್ಥಳದಲ್ಲಿ ಒಂದು ಒಲೆ, ಕಳ್ಳಭಟ್ಟಿ ತಯಾರಿಸಲು ಒಂದು ಅಲ್ಯುಮಿನಿಯಂ ಪಾತ್ರೆ, ಸ್ಟೀಲ್ ಬಿಂದಿಗೆ,

ಪಾತ್ರೆಯಲ್ಲಿ 15 ಕೆಜಿ ಬೆಲ್ಲ, ಒಂದು ಪ್ಲಾಸ್ಟಿಕ್ ಚೀಲದಲ್ಲಿ 12 ಕೆ ಜಿಯಷ್ಟು ತಪಾಲು ಚಕ್ಕೆಗಳು ಕಂಡು ಬಂದಿತು. ಅವುಗಳನ್ನು ನಾವು ಪಂಚರಾದ ಚಾಸಾ-6 ಮತ್ತು 7 ರವರ ಸಮಕ್ಷಮ ವಶ ಪಡಿಸಿಕೊಂಡಿರುತ್ತೇವೆ ಹಾಗೂ ಅಲ್ಲಿ ಬಿಳಿ ಬಣ್ಣದ ಒಂದು 10 ಲೀಟರ್ ಕ್ಯಾನ್ ನಲ್ಲಿ ಕಳ್ಳಭಟ್ಟಿ ಸಾರಾಯಿ ಕಂಡು ಬಂದಿರುತ್ತದೆ. ಅದರಲ್ಲಿ 180 ಎಂ ಎಲ್ ನ್ನು ಎಫ್ ಎಸ್ ಎಲ್ ಗಾಗಿ ತೆಗೆದುಕೊಳ್ಳಲಾಯಿತು. ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಸಿ ಕೆ ಎಂದು ನಮೂದು ಮಾಡಲಾಯಿತು. ನಂತರ ಇವುಗಳಲ್ಲೆವನ್ನು ವಶಪಡಿಸಿಕೊಂಡು ಪಂಚನಾಮೆ ತಯಾರಿಸಿ ವರದಿಯನ್ನು ಚಾಸಾ-10 ರವರಿಗೆ ನೀಡಲಾಯಿತು. ಮಹಜರ್ ನ್ನು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೂ ಮಾಡಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಾನು ಈ ಸಂಬಂಧ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಸದರಿ ದಿನ ಬೆಳಿಗ್ಗೆ 8 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಚಾಸಾ-1 ರವರು ಠಾಣಾಧಿಕಾರಿಯಾಗಿದ್ದರು. ಅವರು 8 ಗಂಟೆಗೆ ಹಾಜರಿದ್ದರು. ಚಾಸಾ-1 ರವರಿಗೆ 8 ಗಂಟೆ ಸಮಯದಲ್ಲಿ ವರ್ತಮಾನ ಬಂದಿರುತ್ತದೆ. ನಾನು ಕರ್ತವ್ಯಕ್ಕೆ ಹಾಜರಾದ ಮೇಲೆ ವರ್ತಮಾನ ಬಂದಿರುತ್ತದೆ. ಕೋಡಿಹಳ್ಳಿಯ ವಾಸಪ್ಪದಗ್ರಾಮಕ್ಕೆ ಹೋದೆವು. ನನ್ನ ಹೇಳಿಕೆಯಲ್ಲಿ ವಾಹನದ ಸಂಖ್ಯೆಯನ್ನು ನಮೂದು ಮಾಡಿಸಿರುತ್ತೇನೆ. ಈ ಸಂಬಂಧ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ನೇರವಾಗಿ ವಾಸಪ್ಪನದೊಡ್ಡಿಗೆ ಹೋಗಿರುತ್ತೇವೆ. ಮುನಿಸ್ವಾಮಿನಾಯ್ಕನ ಜಮೀನಿನ ಬಳಿ ಹೋಗಿರುತ್ತೇವೆ. ಅಲ್ಲಿ ಹೋದಾಗ 10 ಗಂಟೆಯಾಗಿತ್ತು. ಠಾಣೆಯನ್ನು 8 ರಿಂದ 8.30 ಗಂಟೆಗೆ ಬಿಟ್ಟಿರುತ್ತೇವೆ. ಕೋಡಿಹಳ್ಳಿ ಠಾಣೆಗೂ ಸದರಿ ಸ್ಥಳಕ್ಕೂ 70 ಕಿ.ಮೀಟರ್ ಅಂತರವಿರುತ್ತದೆ. ನಮ್ಮ ಠಾಣೆಗೆ ಹಾಗೂ ಸದರಿ ಸ್ಥಳಕ್ಕೆ ಕೇವಲ 25 ರಿಂದ 30 ಕಿ.ಮೀಟರ್ ಆಗುತ್ತದೆಂದರೆ ಸರಿಯಲ್ಲ.

ಚಾಸಾ-1 ರವರಿಗೆ ಸದರಿ ಸ್ಥಳದ ಬಗ್ಗೆ ಮಾಹಿತಿ ಬಂದಿರುತ್ತದೆ. ಅಲ್ಲಿ ಮುನಿಸ್ವಾಮಿನಾಯ್ಕನ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಜಮೀನು ಸೇರುತ್ತದೆ ಎಂಬುದಾಗಿ ನಾನು ಯಾವುದೇ ದಾಖಲೆ ಪರಿಶೀಲನೆ ಮಾಡಿಲ್ಲ ಸಾಕ್ಷಿಯು ಸ್ವಳೀಕರು ತಿಳಿಸಿರುತ್ತಾರೆಂದು ನುಡಿಯುತ್ತಾರೆ. ಚಾಸಾ-6 ಮತ್ತು 7 ರವರು ಈ ಬಗ್ಗೆ ತಿಳಿಸಿರುತ್ತಾರೆ. ನಮ್ಮ ಜೀಪಿನಿಂದ 50 ಮೀಟರ್ ಅಂತರದಲ್ಲಿ ಆರೋಪಿ ನಿಂತಿದ್ದ. ಆರೋಪಿಯು ಸ್ಥಳದಲ್ಲಿ ಇರಲಿಲ್ಲ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಸಹ ಮಾಡಿಲ್ಲ ಎಂದರೆ ಸರಿಯಲ್ಲ.

ಸದರಿ ನಮ್ಮ ಠಾಣೆಯಿಂದ ವಾಸಪ್ಪನದೊಡ್ಡಿ ಗ್ರಾಮಕ್ಕೆ ಹೋಗುವ ದಾರಿ ಮದ್ಯ ಕೋಡಿಹಳ್ಳಿ ಠಾಣೆ ಬರುತ್ತದೆ ಎಂದರೆ ಸರಿ. ನಮಗೆ ಸದರಿ ವರ್ತಮಾನ ಬಂದಿರುವ ವಿಚಾರವಾಗಿ ಹಾಗೂ ದಾಳಿ ಮಾಡುವ ಸಂಬಂಧ ಕೋಡಿಹಳ್ಳಿ ಠಾಣೆಗೆ ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ. ಮಹಜರ್ ನ್ನು ಚಾಸಾ-5 ರವರು ಬರೆದಿರುತ್ತಾರೆ. ಸದರಿ ಮಹಜರ್ ಗೆ ಚಾಸಾ-1, 2, 3, 5 ಮತ್ತು ಚಾಸಾ-6 ಮತ್ತು ಚಾಸಾ-7 ರವರು ಸಹಿ ಮಾಡಿರುತ್ತಾರೆ. ನಿಪಿ-1 ನ್ನು ಕೃತ್ಯ ನಡೆದ ಸ್ಥಳದಲ್ಲಿ ಬರೆದಿರುತ್ತೇವೆ. ಸದರಿ ಮಹಜರ್ ನ್ನು ಜಮೀನಿನಲ್ಲೇ ಬರೆದಿರುತ್ತೇವೆ. ಸದರಿ ಜಮೀನಿನಲ್ಲಿ ನಾವು ಯಾವುದೇ ಮಹಜರ್ ಮಾಡಿಲ್ಲ ಆರೋಪಿಗೆ ಸಂಬಂಧಿಸಿದಂತೆ ಯಾವುದೇಜ ಮೀನು ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾವು ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ರೀತಿ ಕಳ್ಳಭಟ್ಟಿ ಸಾರಾಯಿ ತಯಾರು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಕೇವಲ ಮೇಲಾಧಿಕಾರಿಗಳ ಮಾತನ್ನು ಕೇಳಿ ಅಂಕಿಅಂಶದ ಸಲುವಾಗಿ ಆರೋಪಿಯ ವಿರುದ್ದ ಸುಳ್ಳು ವರದಿ ತಯಾರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಸದರಿ ಮಹಜರ್ ಗೆ ಚಾಸಾ-6 ಮತ್ತು 7 ರವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಕೇವಲ ಚಾಸಾ-1 ಮತ್ತು 10 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

CW.4 PW.1

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**